ಬಸವನಬಾಗೇವಾಡಿಯನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವ ಬಗ್ಗೆ

೫೭೯ ಶ್ರೀ ಟಿ.ಎಸ್. ಪಾಟೀಲ್ (ಹುಮನಾಬಾದ ಪಿಸ್ಪರಿಗಿ).—ಮಾನ್ಯ ಯೋಜನಾ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಸವನ ಬಾಗೇವಾಡಿಯು ಕ್ರಾಂತಿ ಪುರುಷ ಬಸವಣ್ಣನವರ ಜನ್ಮಭೂಮಿ ಎಂಬುವ ವಿಷಯವು ಸರ್ಕಾರಕ್ಕೆ ತಿಳಿದಿದೆಯೇ

ಆ) ಹಾಗಿದ್ದಲ್ಲಿ ಬಸವನ ಬಾಗೇವಾಡಿಯನ್ನು ಪ್ರವಾಸಿಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವ ಉದ್ದೇಶ ಸರ್ಕಾರಕ್ಕೆ ಇದೆಯೆ ?

ಇ) ಹಾಗಿದ್ದಲ್ಲಿ ಅದನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಯೋಜನಾ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವರು).—

ಅ) ಹೌದು

ಆ) ಉದ್ದೇಶ ಇದೆ

ಇ) ಈ ಸ್ಥಳವನ್ನು ಈಗಾಗಲೇ ಪ್ರವಾಸಿ ಕೇಂದ್ರವೆಂದು ಗುರುತಿಸಲಾಗಿದೆ.

ಶ್ರೀ ಬಿ. ಎಸ್. ಪಾಟೀಲ್.— ನನ್ನ 'ಅ' ಮತ್ತು 'ಇ' ಪ್ರಶ್ನೆಗಳಿಗೆ ಉತ್ತರವಾಗಿ ಮಾನ್ಯ ಸಚಿವರು ಏನು ಹೇಳಿದ್ದಾರೆಂದರೆ, ನನ್ನ ಇ ಪ್ರಶ್ನೆಗೆ ಉತ್ತರವಾಗಿ ಈ ಸ್ಥಳವನ್ನು ಈಗಾಗಲೇ ಪ್ರವಾಸಿ ಕೇಂದ್ರವೆಂದು ಗುರುತಿಸಲಾಗಿದೆ ಎಂದು ಹೇಳಿದ್ದಾರೆ. ಇವೆರಡೂ ಮಾಮೂಲಾದ ಉಪಯೋಗವಿಲ್ಲದ ಉತ್ತರ. ಶ್ರೀಮಾನ್ ಬಸವಣ್ಣನವರು ಹುಟ್ಟಿದಂತಹ ಸ್ಥಳ. ಅಂತಹ ಒಂದು ಪುಣ್ಯ ಸ್ಥಳವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡು ಕಳೆದ ೨ ವರ್ಷಗಳಿಂದಲೂ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಪ್ರತಿ ಸಲವೂ ಇದೇ ರೀತಿಯ ಉತ್ತರ ಬರುತ್ತಿದೆ.

ಬಸವಣ್ಣನವರನ್ನು ಕುರಿತು ಕ್ರಾಂತಿಕಾರಿ ಬಸವೇಶ್ವರ ಜಗಜ್ಯೋತಿ ಬಸವೇಶ್ವರರೆಂದು ಕೊಂಡಾಡುತ್ತೇವೆ. ಆದರೆ ಅವರ ಜನ್ಮ ಸ್ಥಳವಾದ ಬಸವನ ಬಾಗೇವಾಡಿಯಲ್ಲಿ ಯಾವ ಸೌಕರ್ಯಗಳನ್ನು ಮಾಡಿಲ್ಲ. ಹಿಂದೆ ಶ್ರೀ ದೇವರಾಜ್ ಅರಸುರವರು ಮುಖ್ಯಮಂತ್ರಿಯಾಗಿದ್ದಾಗ ಅವರು ಮಂಜೂರು ಮಾಡಿದ್ದೇವೆಂದು ಹೇಳಿದ್ದರು. ಜೊತೆಗೆ ಬಸವನ ಬಾಗೇವಾಡಿಗೆ ಭೇಟಿ ಕೊಟ್ಟು ಸ್ಥಳ ಪರಿಶೀಲನೆ ಮಾಡಿದ್ದರು. ಆದರೆ ಅದು ಆಗ ಆಗಲಿಲ್ಲ. ನಂತರ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಗುಂಡೂರಾಯರು ಇದ್ದಾಗ, ನಾನು ಈ ಪ್ರಶ್ನೆಯನ್ನು ಕೇಳಿದ್ದೆ, ಅವರು ಬಸವನ ಬಾಗೇವಾಡಿಯನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡಿದ್ದೇವೆ, ಅದಕ್ಕೆ ೫ ಲಕ್ಷ ರೂಪಾಯಿಯನ್ನು ಮಂಜೂರು ಮಾಡಿದ್ದೇನೆಂದು ಸಹ ಹೇಳಿದರು. ಆದರೆ ಅವರು ಕೊಟ್ಟಂತಹ ಆಶ್ವಾಸನೆ ಕಾರ್ಯರೂಪಕ್ಕೆ ಬಂದಿಲ್ಲ. ಈ ಸಲ ಮಂತ್ರಿಗಳು ಮುಂದಿನ ಆಶ್ವಾಸನೆಯ ರೀತಿಯಲ್ಲಿ ಹೇಳುತ್ತಿದ್ದಾರೆ. ಇದು ಮೂರನೆಯ ಆಶ್ವಾಸನೆಯಾಗುತ್ತದೆ. ಇದು ಕೇವಲ ಆಶ್ವಾಸನೆಯಾಗಿ ಮುಕ್ತಾಯವಾಗುತ್ತದೋ ಅಥವಾ ಇದರ ಬಗ್ಗೆ ಏನಾದರೂ ನಿರ್ದಿಷ್ಟವಾದ ರೂಪುರೇಷೆಗಳನ್ನು ಹಾಕಿಕೊಂಡು ಅದನ್ನು ನಿಗದಿತ ವೇಳೆಯಲ್ಲಿ ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡುತ್ತಾರಾ ಎಂದು ನಾನು ಸರ್ಕಾರವನ್ನು ಕೇಳುತ್ತೇನೆ. ಅಂತಹ ಮಹಾನ್ ಪುರುಷನ ಪುಣ್ಯಭೂಮಿಯಾದಂಥ ಬಸವನ ಬಾಗೇವಾಡಿಯನ್ನು ಪ್ರವಾಸಿ ಕೇಂದ್ರವನ್ನಾಗಿ ಡಿಕ್ಲೇರ್ ಮಾಡಿ ಅದರ ಅಭಿವೃದ್ಧಿಗೇನಾದರೂ ಕಾರ್ಯಕ್ರಮಗಳನ್ನು ಕೈಗೊಳ್ಳುವ ಉದ್ದೇಶ ಸರ್ಕಾರಕ್ಕೆ ಇದೆಯೇ ಎಂದು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.— ಬಹುಶಃ ಮೂರನೆ ಆಶ್ವಾಸನೆಯನ್ನು ಕೊಡತಕ್ಕ ಸಾಹಸ ನಾನು ಮಾಡುವುದಿಲ್ಲ. ಏಕೆಂದರೆ ಆಶ್ವಾಸನೆಗಳು ಭರವಸೆಗಳು ಸನ್ಮಾನ್ಯ ಶಾಸಕರಲ್ಲಿ ಶಿಥಿಲಗೊಂಡು ಹೋಗಿವೆ. ಈ ಬಸವನ ಬಾಗೇವಾಡಿಯನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡಲು ಬಸವಣ್ಣನವರ ಜನ್ಮ ಸ್ಥಳದಲ್ಲಿ ಸರ್ವೆ ನಂ. ೧೬೪೧ ೧೯ರಲ್ಲಿ ೪ ಎಕರೆ ಜಮೀನನ್ನು ವಶಪಡಿಸಿಕೊಳ್ಳುವ ಬಗ್ಗೆ ಸರ್ಕಾರ ಕಾರ್ಯಕ್ರಮ ಕೈಗೊಂಡಾಗ ಬಹುಶಃ ಅದರಲ್ಲಿ ಸ್ವಲ್ಪ ವಿವಾದ ಬಂತು. ತಾವು ಈ ವಿವಾದವನ್ನು ತಾವು ಕುಳಿತುಕೊಂಡು ಇತ್ಯರ್ಥ ಮಾಡಲು ಸಹಾಯವನ್ನು ಮಾಡಿದರೆ, ಈ ಕ್ಷೇತ್ರವನ್ನು ಅಭಿವೃದ್ಧಿ

ಗೊಳಿಸಿ ಅಲ್ಲಿ ಏನೇನು ಸೌಲಭ್ಯಗಳನ್ನು ಒದಗಿಸಬೇಕೋ ಆವುಗಳನ್ನು ಒದಗಿಸಲು ತಕ್ಷಣ ಕಾರ್ಯಕ್ರಮ ಕೈಗೊಳ್ಳುತ್ತೇವೆ.

ಶ್ರೀ ಬಿ.ಎಸ್. ಪಾಟೀಲ್.— ಈ ಪ್ರಶ್ನೆ ಒಂದು ದಶಕದಿಂದ ನಡೆಯುತ್ತಿದೆ. ಅವರ ಮನೆ ಖರೀದಿ ಮಾಡುವ ಬಗ್ಗೆ ಅದನ್ನು ಕೊಡಿಸಿಕೊಡಬೇಕೆಂದು ಕೇಳಲು ಯಾವ ಅಧಿಕಾರಿಗಳಾ ನಮ್ಮನ್ನು ಭೇಟಿ ಕೊಟ್ಟಿಲ್ಲ. ಈ ಬಗ್ಗೆ ಏನಾದರೂ ಸಮಸ್ಯೆಗಳಿದ್ದರೆ ಬಸವನ ಬಾಗೇವಾಡಿಗೆ ತಾವು ಯಾರನ್ನಾದರೂ ಕಳುಹಿಸಿದರೆ ಶಾಸಕರಾದ ನಾವು ಹಾಗೂ ಅಲ್ಲಿಯ ಜನರು ಎಲ್ಲರೂ ಕೂಡಿಕೊಂಡು ಆ ಸಮಸ್ಯೆಗಳನ್ನು ನಿವಾರಣೆ ಮಾಡಲು ಪಯತ್ನ ಮಾಡುತ್ತೇವೆ. ಈ ಸ್ಥಳಕ್ಕೆ ಕೂಡಲೇ ತಾವು ಸಹ ಭೇಟಿ ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಈ ಸ್ಥಳಕ್ಕೆ ಹಲವಾರು ಭಾಗಗಳಿಂದ ಬಹಳಷ್ಟು ಜನ ಬರುತ್ತಾರೆ. ಆದರೆ ಅವರಿಗೆ ಅಲ್ಲಿ ಇಳಿದುಕೊಳ್ಳಲು ಯಾವ ಲಾಡ್ಜಿಂಗ್ ವ್ಯವಸ್ಥೆ ಇಲ್ಲ. ಯಾವ ಹೋಟೆಲು ಸಹ ಇಲ್ಲ. ಕನಿಷ್ಠ ಪಕ್ಷ ಎರಡು ಮೂರು ರೂಮುಗಳು ಇರತಕ್ಕ ಒಂದು ಲಾಡ್ಜಿಂಗ್‌ವಾದರೂ ಕಟ್ಟಿಸಬೇಕು. ಮೊದಲು ತಾವು ಇದನ್ನು ಪ್ರವಾಸಿ ಕೇಂದ್ರವೆಂದು ಡಿಕ್ಲೇರ್ ಮಾಡಿದರೆ ಹೆಚ್ಚು ಅನುಕೂಲವಾಗುತ್ತದೆ. ಮೊಟ್ಟ ಮೊದಲನೆಯದಾಗಿ ಇದನ್ನು ಪ್ರವಾಸಿ ಕೇಂದ್ರವನ್ನಾಗಿ ಡಿಕ್ಲೇರ್ ಮಾಡಲು ಯಾವ ಅಡ್ಡಿ ಆತಂಕಗಳೂ ಇಲ್ಲ, ಆದ್ದರಿಂದ ಅದೇ ಸದನದಲ್ಲಿ ತಾವು ಇದನ್ನು ಪ್ರವಾಸಿ ಕೇಂದ್ರವೆಂದು ಘೋಷಣೆ ಮಾಡಿದರೆ ನಾನಂ ತಮಗೆ ನನ್ನ ಅಭಿನಂದನೆಯನ್ನು ಸಲ್ಲಿಸುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ:— ಆ ಜಾಗವನ್ನು ಪ್ರವಾಸಿ ಕೇಂದ್ರವನ್ನಾಗಿ ಈಗಾಗಲೇ ನಮ್ಮ ಹೊತ್ತಿಗೆಯಲ್ಲಿ ಪ್ರಕಟಮಾಡಿದ್ದೇವೆ. ಪ್ರಶ್ನೆ ಏನೆಂದರೆ, ಜನ ಆಡಿಕೊಳ್ಳುವ ರೀತಿಯಲ್ಲಿ ಬಸವೇಶ್ವರರು ಹುಟ್ಟಿದ ಮನೆ ಕೂಡ ಅಲ್ಲಿ ಇದೆ ಎಂದು ನಾನು ಕೂಡ ಹಿಂದೆ ಹೋದಾಗ ಅವನ್ನು ತೋರಿಸಿದ್ದಾರೆ ಅವನ್ನು ಅಭಿವೃದ್ಧಿ ಪಡಿಸಲಿಕ್ಕೆ ಅಲ್ಲಿಯ ಜಾಗವನ್ನು ತೆಗೆದುಕೊಳ್ಳಬೇಕಾಗಿದೆ. ಈ ಶಾಸನ ಸಭೆ ಮುಗಿದ ಮೇಲೆ ಸನ್ಮಾನ್ಯ ಶಾಸಕರ ಜೊತೆಯಲ್ಲಿ ನಾನು ಸಹ ಆ ಸ್ಥಳಕ್ಕೆ ಹೋಗುತ್ತೇನೆ. ಅಲ್ಲಿ ಏನು ಸಮಸ್ಯೆ ಇದೆ, ಅದನ್ನೆಲ್ಲ ಅಲ್ಲಿಯೇ ಕುಳಿತುಕೊಂಡು ಪರಿಹಾರ ಮಾಡಿ ಮುಂದೆ ಏನು ಕಾರ್ಯಕ್ರಮ ಕೈಗೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಎಸ್. ಪಾಟೀಲ್.— ಸ್ಥಳ ವೀಕ್ಷಣೆ ಮಾಡುವುದು ಅದನ್ನು ಅಭಿವೃದ್ಧಿ ಮಾಡುವುದಂ ಮುಂದಿನ ಪ್ರಶ್ನೆ. ಈಗ ಇದನ್ನು ಪ್ರವಾಸಿಕೇಂದ್ರವೆಂದು ಈಗಾಗಲೇ ಸಾರಲಿಕ್ಕೆ ಸರ್ಕಾರಕ್ಕೆ ಏನು ಅಡೆತಡೆಗಳು ಇವೆ? ಇದು ಪ್ರವಾಸಿ ಕೇಂದ್ರವೆಂದು ಪುಸ್ತಕದಲ್ಲಿ ಸೇರ್ಪಡೆಯಾಗಿದೆ. ಆದರೆ ಒಂದು ದಶಕದಿಂದ ಇದು ಪರಿಹಾರವಾಗದ ಸಮಸ್ಯೆಯಾಗಿದೆ.

ಅಧ್ಯಕ್ಷರು.— ಬಸವೇಶ್ವರರು ಹುಟ್ಟಿದ ಮನೆ ಇದೆಯೆಂದು ಹೇಳಿದ್ದಾರೆ. ಅದನ್ನು ಆದರೂ ತಕ್ಷಣ ಸರ್ಕಾರದವರು ಪ್ರವಾಸಿ ಕೇಂದ್ರವೆಂದು ಡಿಕ್ಲೇರ್ ಮಾಡಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

ಶ್ರೀ ಬಿ.ಎಸ್. ಪಾಟೀಲ್.— ಮಾನ್ಯ ಮಂತ್ರಿಗಳು ಅಲ್ಲಿಗೆ ಬಂದಾಗ ಈ ಸಮಸ್ಯೆಯ ಬಗ್ಗೆ ಏನಂ ಕೇಳುತ್ತಾರೆ. ಅದಕ್ಕೆ ಎಲ್ಲಾ ರೀತಿಯ ಸಹಾಯವನ್ನು ನಾವು ಮಾಡುತ್ತೇವೆ, ಆದರೆ ಈಗ ಬಸವನ ಬಾಗೇವಾಡಿಯನ್ನು ಪ್ರವಾಸಿ ಕೇಂದ್ರವನ್ನಾಗಿ ಡಿಕ್ಲೇರ್ ಮಾಡಲು ಏನು ತೊಂದರೆ ಇದೆ.

ಅಧ್ಯಕ್ಷರು.— ಈಗಾಗಲೇ ಮಾಡಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ— ಅದನ್ನು ಪುಸ್ತಕದಲ್ಲಿ ಮಾತ್ರ ಮಾಡಿದ್ದಾರೆ. ಈಗಲಾದರೂ ಡಿಕ್ಲೇರ್ ಮಾಡಲಿಕ್ಕೆ ಏನೂ ತೊಂದರೆ ಇಲ್ಲ. ಅದರ ನಂತರ ಮುಂದೆ ಅವಕ್ಕೆ ಬೇಕಾದಂತಹ ಅನುಕೂಲಗಳನ್ನು ಸರ್ಕಾರ ಒದಗಿಸಲು ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈ ಬಗ್ಗೆ ಸರ್ಕಾರ ಬರೀ ಆಶ್ವಾಸನೆಯನ್ನು ಕೊಡುತ್ತಾ ಬಂದಿದೆ. ಈಗ ಇದು ಮೂರನೆಯ ಆಶ್ವಾಸನೆ ಆಗಿದೆ.

ಅಧ್ಯಕ್ಷರು.— ಈಗ ಅವರು ಆಶ್ವಾಸನೆಯನ್ನು ಕೊಡುತ್ತಿಲ್ಲ.

ಶ್ರೀ ಬಿ. ಎಸ್. ಪಾಟೀಲ್.—ಮೂರನೆಯಸಲ ಈ ಸದನದಲ್ಲಿ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಈ ರೀತಿ ಆದರೆ ಜನರಿಗೆ ಸರ್ಕಾರದ ಮೇಲೆ ಯಾವ ರೀತಿಯ ವಿಶ್ವಾಸವೂ ಉಳಿಯುವುದಿಲ್ಲ ಮಾನ್ಯ ಮಂತ್ರಿಗಳು ಅದನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುತ್ತೇವೆಂದು ಒಂದು ಆಶ್ವಾಸನೆಯನ್ನು ಈ ಸದನದಲ್ಲಿ ಕೊಟ್ಟರೆ ಸರ್ಕಾರಕ್ಕೆ ಯಾವ ರೀತಿಯ ಭಾರವೂ ಬೀಳುವುದಿಲ್ಲ. ಮುಂದೆ ಅವರು ಅಲ್ಲಿಗೆ ಬಂದಾಗ ಸರ್ಕಾರಕ್ಕೆ ಬೇಕಾದ ಎಲ್ಲ ರೀತಿಯ ಸಹಾಯವನ್ನು ಮಾಡುತ್ತೇವೆ. ಆದ್ದರಿಂದ ದಯವಿಟ್ಟು ಈಗ ಡಿಕ್ಲೇರ್ ಮಾಡಬೇಕೆಂದು ವಿನಂತ್ರೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಈ ಬಸವನ ಬಾಗೇವಾಡಿಯನ್ನು ಪ್ರವಾಸೀಕೇಂದ್ರವನ್ನಾಗಿ ಘೋಷಣೆ ಮಾಡಲಿಕ್ಕೆ ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಈಗಾಗಲೇ ಅದು ಪ್ರವಾಸಿ ಕೇಂದ್ರ ಎಂದು ಘೋಷಣೆ ಆಗಿದೆ. ಇದರ ಜೊತೆಗೆ ಅಲ್ಲಿನ ಸಾಹಿತ್ಯ, ಇತಿಹಾಸವನ್ನು ನೋಡಿ ರಾಷ್ಟ್ರೀಯ ಮಟ್ಟ ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಅದನ್ನು ಪ್ರಚಾರ ಮಾಡುವ ಬಗ್ಗೆ ಎಲ್ಲ ರೀತಿಯ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇವೆ. ಎರಡನೆಯದಾಗಿ ಈ ಸದನ ಮುಗಿದ ಮೇಲೆ ಸನ್ಮಾನ್ಯ ಶಾಸಕರ ಜೊತೆ ಹೋಗಿ ಅಲ್ಲಿ ಏನು ಬಸವಣ್ಣನವರ ಮನೆ ಇದೆ ಎಂದು ಪ್ರತೀತಿ ಇದೆ, ಅದನ್ನು ನೋಡಿ ಮುಂದೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ, ಮಾನ್ಯ ಶಾಸಕರ ಜೊತೆ ಅಲ್ಲಿಗೆ ಹೋಗಿ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಿಸಿಕೊಂಡು ಅಲ್ಲಿ ಏನು ಒಂದು ಸೂಕ್ತವಾದ ಒಂದು ಪರಿಸರವನ್ನು ನಿರ್ಮಾಣ ಮಾಡಬೇಕೋ ಅದನ್ನು ಸರ್ಕಾರ ಮಾಡುತ್ತದೆಂದು ಹೇಳಿದ ಮೇಲೆ ಬಹುಶಃ ಅದು ಆಶ್ವಾಸನೆ ಅಲ್ಲ, ಕಾರ್ಯಕ್ರಮ ಆಗುತ್ತದೆ. ಈಗ ಆಶ್ವಾಸನೆಯ ಕಾಲ ದಾಟಿ ಹೋಗಿದೆ.

ಅಧ್ಯಕ್ಷರು ಅಲ್ಲಿ ಭಕ್ತಾದಿಗಳು ಮತ್ತು ಪ್ರವಾಸಿಗಳು ಬರುವುದರಿಂದ ಲಾಡ್ಜ್ ನಿರ್ಮಾಣ ಮಾಡಬೇಕೆಂದು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಆ ಯೋಜನೆ ಕೂಡ ಇದೆ.

ಶ್ರೀ ಎಸ್.ಹೆಚ್. ಕೌಜಲಗಿ.—ಇವತ್ತು ಬಸವನಬಾಗೇವಾಡಿಯಲ್ಲಿ ಸರ್ಕಾರಿ ಲ್ಯಾಂಡ್ ಇದೆ ಹಿಂದೆ ಅಲ್ಲಿ ಲಿಂಗನ ಸ್ವಾಮಿಗಳು ತೆಗೆದುಕೊಂಡ ೧೦ ಎಕರೆ ಜಾಗೀರಿ ಜಾಗ ಇದ್ದು ಅದು ಸರ್ಕಾರದ ವಶದಲ್ಲಿಯೇ ಇದೆ. ಆದ್ದರಿಂದ ಅಲ್ಲಿ ಲ್ಯಾಂಡ್ ಪ್ರಾಬ್ಲಮ್ ಇಲ್ಲ. ಅಕಸ್ಮಾತ್ ತಮಗೆ ಅಲ್ಲಿ ಜಾಗ ಸಿಗದಿದ್ದರೂ ಅಲ್ಲಿ ಭೂಮಿ ಬೆಲೆ ಎಕರೆಗೆ ೧೦ ಸಾವಿರಕ್ಕಿಂತಾ ಮೇಲೆ ಇಲ್ಲ. ಅಷನ್ನು ಕೊಂಡು ತಾವು ಕೆಲಸ ಕೈಗೊಳ್ಳಬಹುದು. ಎರಡನೆಯದಾಗಿ, ಬಸವನ ಬಾಗೇವಾಡಿಯನ್ನು ಪ್ರವಾಸೀ ಕೇಂದ್ರವಾಗಿ ಅಭಿವೃದ್ಧಿ ಪಡಿಸುವ ಸಲುವಾಗಿ ಪ್ರಪೋಸಲ್ ಕಳುಹಿಸಿ ಎಂದೂ ಕೇಂದ್ರ ಸರ್ಕಾರದವರು ಕೇಳಿದ್ದರೂ, ಇನ್ನೂ ಆ ಬಗ್ಗೆ ಬರೆದಿಲ್ಲ. ಇವತ್ತಿ ಆ ಪ್ರಪೋಸಲ್ ಕೇಂದ್ರ ಸರ್ಕಾರಕ್ಕೆ ಹೋಗಿಲ್ಲ. ಈ ಬಗ್ಗೆ ತಮ್ಮ ಆಫೀಸಿನಲ್ಲಿ ಕೇಳಿದರೆ, ಈಗಾಗಲೇ ಕೇಂದ್ರಕ್ಕೆ ೩೨ ಯೋಜನೆಗಳನ್ನು ಕಳುಹಿಸಿದ್ದು ಅವು ಮಂಜೂರು ಆಗುವವರೆಗೆ ಹೊಸ ಪ್ರಪೋಸಲ್ ಕಳುಹಿಸುವುದಿಲ್ಲವೆಂದು ಇದನ್ನು ಹಾಗೆ ಇಟ್ಟುಕೊಂಡಿದ್ದಾರೆ. ಇವತ್ತು ಕೇಂದ್ರ ಸರ್ಕಾರ ಕೇಳಿರುವಾಗ ಅದನ್ನು ಕಳುಹಿಸುವುದು ಒಳ್ಳೆಯದು. ಇದರಿಂದ ಕೇಂದ್ರವೂ ಕೂಡಾ ಇದನ್ನು ಪ್ರವಾಸೀ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ಅನುಕೂಲವಾಗುತ್ತದೆಂದೂ ಹೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.— ನಮ್ಮ ಯೋಜನೆಗೆ ಅನುಕೂಲ ಇರತಕ್ಕ ಜಮೀನು ಅಲ್ಲಿ ಸರ್ಕಾರದ್ದು ಇದ್ದರೆ ಅದನ್ನು ತೆಗದುಕೊಳ್ಳುತ್ತೇವೆ. ಮತ್ತೆ ಕೇಂದ್ರ ಸರ್ಕಾರದಲ್ಲಿ ಬೇರೆ ಯೋಜನೆಗಳು ಬಾಕಿ ಇವೆ ಎನ್ನುವ ಆಧಾರದ ಮೇಲೆ ನಾವು ಇದನ್ನು ತಡೆ ಹಿಡಿಯುವುದಿಲ್ಲ. ಇದು ಪ್ರಮುಖವಾಗಿರತಕ್ಕ ಯೋಜನೆಯಾಗಿದ್ದು ನಾನೇ ಸ್ವತಃ ಕೇಂದ್ರದ ಸಚಿವರ ಜೊತೆ ಮಾತನಾಡಿ ಇದರ ಬಗ್ಗೆ ರಾಜ್ಯ ಸರ್ಕಾರದಿಂದ ಏನು ಸೌಲಭ್ಯ ಒದಗಿಸುವುದಕ್ಕೆ ಸಾಧ್ಯ ಇದೆ ಹಾಗೂ ಕೇಂದ್ರ ಸರ್ಕಾರದಿಂದ ಇದಕ್ಕೆ ಎಷ್ಟು ಅನುದಾನ ಬರುತ್ತದೆಂದೂ ನೋಡಿ ಎಲ್ಲವನ್ನೂ ಕ್ರೋಢೀಕರಿಸಿ ಸಮಗ್ರವಾದ ಒಂದು ಯೋಜನೆಯನ್ನು ನಾವು ಮಾಡುತ್ತೇವೆ ಮತ್ತು ಈ ಯೋಜನೆಯನ್ನು ಆದಷ್ಟು ಜಾಗ್ರತೆ ಜಾರಿಗೆ ತರುವುದಕ್ಕೆ ಎಲ್ಲ ರೀತಿಯ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ.— ಅಲ್ಲಿ ಸರ್ಕಾರಿ ಜಮೀನು ಇದ್ದರೆ ಅಡ್ಡಿ ಇಲ್ಲ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಅಕಸ್ಮಾತಾಗಿ ಅಲ್ಲಿ ಸರ್ಕಾರದ ಜಮೀನು ಸಿಗದೇ ಇದ್ದರೂ ಇದು ಪ್ರಾಮುಖ್ಯವಾದ ಸ್ಥಳವಾದ್ದರಿಂದ ಸರ್ಕಾರ ಅಲ್ಲಿ ಸೂಕ್ತವಾದ ಬೇರೆ ಜಮೀನನ್ನಾದರೂ ಆಕ್ವೈರ್ ಮಾಡಿ ಈ ಯೋಜನೆಯನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಸರ್ವೇ ನಂ ೧೬೪/೧ನಲ್ಲಿ ೪ ಎಕರೆ ಖಾಸಗೀ ಜಮೀನನ್ನು ವಶಪಡಿಸಿಕೊಳ್ಳುವುದಕ್ಕೆ ಈಗಾಗಲೇ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಎಂದು ನಾನು ಈಗಾಗಲೇ ಸದನಕ್ಕೆ ಹೇಳಿದ್ದೇನೆ. ಇಷ್ಟು ಮಾತ್ರ ಅಲ್ಲದೇ ಅಲ್ಲಿ ಬಸವಣ್ಣನವರು ಜನ್ಮ ಪಡೆದ ಮನೆ ಇದೆ ಎಂದು ನಿನು ಪ್ರತೀತಿ ಇದೆ ಅದು ನಿಜವಾದರೆ ಆ ಮನೆಯನ್ನೂ ಸಹ ವಶಪಡಿಸಿಕೊಂಡು ಅದನ್ನು ಅಭಿವೃದ್ಧಿಪಡಿಸುವುದಕ್ಕೆ ಕಾರ್ಯಕ್ರಮವನ್ನು ಇದರ ಜೊತೆಯಲ್ಲಿಯೇ ಹಾಕಿಕೊಳ್ಳುತ್ತೇವೆ.